**‘ಕೊರೊನಾ ಪೂರ್ವ ಕಾಲದ ಕನ್ನಡ ದೃಶ್ಯಕಲಾ ಸಂದರ್ಭದಲ್ಲಿ ಹೆಚ್ಚು ಬೇಡಿಕೆಯಲ್ಲಿದ್ದವರು ಮಣಿ. ಹಾಗಿದ್ದೂ ತಮ್ಮ ಕಲಾಕೃತಿಗಳ ಬೆಲೆಗಳನ್ನು ಹೆಚ್ಚಿಸಲು ಪ್ರಯತ್ನಿಸಲೇ ಇಲ್ಲ. ಈ ಹಿನ್ನೆಲೆಯಲ್ಲಿ ಗ್ಯಾಲರಿಗಳ ಮಾರುಕಟ್ಟೆ ರಾಜಕಾರಣವೂ ಇದೆ.**

ತಾತ್ವಿಕತೆಗಿಂತಲೂ ತಮ್ಮ ಮನಸ್ಸಿನ ಇಷ್ಟದಂತೆ ಕಷ್ಟಪಟ್ಟು ಚಿತ್ರಿಸುವ ಸಾಹಸ ಕ್ರಮಗಳನ್ನು ಅವರು ಬೆನ್ನಟ್ಟಿದರು. ಹಾಗಾಗಿಯೇ ಅವರ ಬಾದಾಮಿಯ ಕೃತಿಗಳಲ್ಲಿ, ಕಣ್ಣಿಗೆ ಕಾಣುವ ನೈಜ ಲೋಕವನ್ನು ಅರೆ ನೈಜತೆಗೆ ರೂಪಾಂತರಿಸಿದ್ದಾರೆ. ಬಾಳೆಹಣ್ಣಿನ ಗೊನೆ, ಹುಂಜ, ಕೋಳಿ, ಗೊಂಬೆಗಳು ಬಹಳ ಮುಖ್ಯವಾಗಿ, ಆ ಭಾಗದ ಗಂಡು ಹೆಣ್ಣು ರೂಪಗಳ ಅರೆ – ನೈಜ ರೂಪಾಂತರ ಅಪೂರ್ವ.

ಬಹುತೇಕ ಸಂಕೀರ್ಣತೆ, ಸೂಕ್ಷ್ಮತೆ ಮತ್ತು ಮುಖ್ಯವಾಗಿ ಸಂವೇದನಾಶೀಲತೆಯನ್ನು ಬೇಡುವ ರೇಖಾಚಿತ್ರ, print ಮಾಧ್ಯಮದ etching, dry–point, screen print, lino ಇತ್ಯಾದಿ ತಂತ್ರಗಳ ಕೃತಿಗಳು ನಾಜೂಕು, ನಯವಂತಿಕೆಗಳನ್ನು ಅರಗಿಸಿ ಕೊಂಡಿದ್ದರೆ, ತೈಲ, ಆಕ್ರಲಿಕ್, ಪೇಸ್ಟಲ್ ಇತ್ಯಾದಿಗಳೇ ಅಲ್ಲದೆ, ಸುಟ್ಟ ದ್ರಾಕ್ಷಿ ಬಳ್ಳಿಯ ಇದ್ದಿಲುಗಳನ್ನು ದುಡಿಸಿಕೊಂಡ ವರ್ಣಚಿತ್ರಗಳ ರೂಪ ಲಕ್ಷಣಗಳು, ಒರಟುತನವನ್ನು ಮೈಗೂಡಿಸಿಕೊಂಡಂತೆ ಅಭಿವ್ಯಕ್ತಗೊಂಡಿವೆ. ಕೆಲವೇ ಇಂಚಿನ ಪ್ರಿಂಟ್, ರೇಖಾಚಿತ್ರಗಳೇ ಅಲ್ಲದೆ, ಹಲವು ಅಡಿ ಉದ್ದ ಅಗಲಗಳ ಅವಕಾಶ(space)ದ ಚಿತ್ರಕೃತಿಗಳು ಅವು.

ಕಲೆಯನ್ನು ಹಲವು ರೀತಿಗಳಲ್ಲಿ ಬಳಸುವ ಮೂಲಕ ಬದುಕುವುದನ್ನು ಮಣಿ ತಮ್ಮ ವಿದ್ಯಾರ್ಥಿಗಳಿಗೆ ಕಲಿಸಿದರು. ಶಿವಾನಂದ ಬಂಟನೂರು, ಎಸ್.ವಿ. ಹೂಗಾರ್, ಸುನೀಲ್ ಮಹಮದಾಪುರ, ಸತೀಶ್ ಸೊಲ್ಲಾಪುರ್, ಕಮಲಂ ಅರಸು, ಪರಮೇಶ್ ಜೋಳದ ಮೊದಲಾದವರು ಇಲ್ಲಿ ನೆನಪಾಗುತ್ತಾರೆ.

ತಮ್ಮ ಕಲಾಶಾಲೆಯ ಗೆಳೆಯರ, ಇನ್ನಿತರರ ನಡುವೆ ನಡೆಯುತ್ತಿದ್ದ intellectual ಚರ್ಚೆ, ಸಂವಾದ, ಇತ್ಯಾದಿಗಳಲ್ಲಿ ಆಸಕ್ತಿ ತೋರದೆ ‘ಕಲಾಸೃಷ್ಟಿಯೊಂದೇ ಸತ್ಯ’ ಎಂಬಂತೆ ಮಣಿ ಅದರಲ್ಲಿ ತಲ್ಲೀನರಾಗುತ್ತಿದ್ದರು. ದೈಹಿಕವಾಗಿ ಕಲಾಶಾಲೆಯ ಗೋಡೆಗಳನ್ನು ಕಟ್ಟಿದ ಅವರು, ತಮ್ಮ ಗುರು ಸ್ಥಳೀಯ ಸಮಸ್ಯೆಗಳಿಂದ ಬಹುತೇಕ ಬಿಡುಗಡೆಗೊಂಡು ನೆಮ್ಮದಿಯಾಗಿರುವಂತೆ ನೋಡಿಕೊಂಡದ್ದು ಗಮನೀಯ.

ದೇಶದ ಯಾವುದೇ ರಾಜ್ಯದ ಜಾನಪದ ಕಲೆಯನ್ನು ಉತ್ತಮವಾಗಿ ನಕಲು ಮಾಡುತ್ತಿದ್ದ, ಓತಪ್ರೋತವಾಗಿ ರೇಖಿಸುವ ಅಸಾಧಾರಣ ಪ್ರತಿಭಾಶಾಲಿ ಮಣಿ, ಕರ್ನಾಟಕ ಕಲಾಮೇಳಗಳಿಗೆ ತಮ್ಮದೇ ಆದ ದೊಡ್ಡ ರೀತಿಯಲ್ಲಿ ಕಲಾತ್ಮಕವಾಗಿ ನೆರವಾಗಿದ್ದನ್ನು ನಾನು ನೋಡಿದ್ದೇನೆ.

ರಾಜಕಾರಣದ ಪರೋಕ್ಷ ನಂಟು ಇದ್ದ ಮಣಿಯವರು, ಚಿತ್ರಕೃತಿಯೊಂದರಲ್ಲಿ ‘ಲೈಂಗಿಕ ಕಾರ್ಯಕರ್ತೆಯೊಬ್ಬಳಿಗೆ ಇರುವ ನಿಯತ್ತು ರಾಜಕಾರಣಿಗಳಿಗೆ ಇರುವುದಿಲ್ಲ’ ಎಂಬ ಗ್ರಹಿಕೆಯನ್ನು ಬಿಂಬಿಸಿದ್ದರು! ತಮ್ಮ ತಾಯಿಯ ಬಗ್ಗೆ ಅಪಾರ ಪ್ರೀತಿ ಹೊಂದಿದ್ದ ಅವರು, ತಮಗಾಗಿ ಕಾಯುತಿದ್ದ ತಾಯಿಯನ್ನು ನೋಡಲು ಕೆಲಸ ಮುಗಿದ ಕೂಡಲೇ ಮನೆಯತ್ತ ಹೆಜ್ಜೆ ಹಾಕುತ್ತಿದ್ದರು. ಸಹಜವಾಗಿಯೇ ಅವರ ‘ತಾಯಿ ಮತ್ತು ಮಗು’ ಶೀರ್ಷಿಕೆಯ ಮಾಲೆಯಲ್ಲಿ ಹಲವಾರು ಕಲಾಕೃತಿಗಳು ಮೂಡಿ ಬಂದವು.

ಫ್ಯೂಚರಿಸ್ಟ್ ಕಲಾವಿದರ ದೃಷ್ಟಿಕೋನದಂತೆ ‘ಐತಿಹಾಸಿಕ ಪ್ರಜ್ಞೆ’ಯನ್ನು ನಿರಾಕರಿಸುವಂತೆ